**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: **ರಾಜ್ಯದ ಸರ್ಕಾರಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸುಗಳ ಸೀಟುಗಳ ಶುಲ್ಕ ಪರಿಷ್ಕರಣೆ ಬಗ್ಗೆ.**

---***---

**ಓದಲಾಗಿದೆ:**

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ದಿ: 25-05-2018 ರ ಪತ್ರ ಸಂಖ್ಯೆ: ಡಿಎಂಇ/ಎಂಸಿಎಸ್/10/2018-19.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರು 2017-18 ನೇ ಸಾಲಿನವರೆಗೆ ಎಂಬಿಬಿಎಸ್/ಬಿಡಿಎಸ್ ಶುಲ್ಕಗಳು ಕ್ರಮವಾಗಿ ರೂ. 16,700/- & 14,400/- ಗಳಾಗಿದ್ದು, ಬಹಳ ವರ್ಷಗಳಿಂದ ಸರ್ಕಾರಿ ಕಾಲೇಜುಗಳಲ್ಲಿನ ಸೀಟುಗಳ ಶುಲ್ಕವು ಪರಿಷ್ಕೃತವಾಗಿರುವುದಿಲ್ಲ. ರಾಜ್ಯದಲ್ಲಿ ಎಲ್ಲಾ ಸರ್ಕಾರಿ ಕಾಲೇಜುಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಈ ಸ್ವಾಯತ್ತ ಸಂಸ್ಥೆಗಳ ಖರ್ಚುಗಳನ್ನು ಆಯಾ ಸಂಸ್ಥೆಗಳೇ ವಹಿಸಿಕೊಳ್ಳಬೇಕಾಗಿರುತ್ತದೆ. ಈಗಿರುವ ಸರ್ಕಾರಿ ಶುಲ್ಕದಲ್ಲಿ ಸರ್ಕಾರಿ ಕಾಲೇಜುಗಳ ಖರ್ಚು ವೆಚ್ಚಗಳ ನಿರ್ವಹಣೆಯೂ ಬಹಳ ದುಸ್ತರವಾಗಿದ್ದು, ಸರ್ಕಾರಿ ಕಾಲೇಜುಗಳ ಸೀಟಿನ ಶುಲ್ಕಗಳು ಪರಿಷ್ಕೃತವಾದಲ್ಲಿ ಸಂಸ್ಥೆಗಳ ಹಣಕಾಸಿನ ಪರಿಸ್ಥಿತಿಯೂ ಸುಧಾರಣೆಗೊಳ್ಳುತ್ತದೆ.

2017-18 ನೇ ಸಾಲಿನಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳ ಶುಲ್ಕವು ರೂ. 77,000/- ಗಳಾಗಿದ್ದು, ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ ಸೀಟುಗಳ ಶುಲ್ಕವು ರೂ. 16,700/- ಗಳಾಗಿರುತ್ತದೆ ಹಾಗೂ ದಂತ ವೈದ್ಯಕೀಯ ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳ ಶುಲ್ಕವು ರೂ. 49,500/- ಗಳಾಗಿದ್ದು, ದಂತ ವೈದ್ಯಕೀಯ ಸರ್ಕಾರಿ ಕಾಲೇಜುಗಳಲ್ಲಿನ ಸೀಟುಗಳ ಶುಲ್ಕವು ರೂ. 14,400/- ಗಳಾಗಿರುತ್ತದೆ. ಈ ಎರಡೂ ಶುಲ್ಕಗಳ ಮಧ್ಯೆ ಹೆಚ್ಚು ಅಂತರವಿರುವುದರಿಂದ 2018-19 ನೇ ಸಾಲಿಗೆ ಸರ್ಕಾರಿ ವೈದ್ಯಕೀಯ ಕಾಲೇಜಿನ ಎಂಬಿಬಿಎಸ್ ಸೀಟುಗಳ ಶುಲ್ಕವನ್ನು ರೂ. 50,000/- ಗಳಿಗೆ & ಸರ್ಕಾರಿ ದಂತ ವೈದ್ಯಕೀಯ ಕಾಲೇಜಿನ ಬಿಡಿಎಸ್ ಸೀಟುಗಳ ಶುಲ್ಕವನ್ನು ರೂ. 40,000/- ಗಳಿಗೆ ನಿಗದಿಪಡಿಸುವ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆದ್ದರಿಂದ ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, 2018-19 ನೇ ಸಾಲಿನಿಂದ ಜಾರಿಗೆ ಬರುವಂತೆ ಸರ್ಕಾರಿ ವೈದ್ಯಕೀಯ ಕಾಲೇಜಿನ ಎಂಬಿಬಿಎಸ್ ಸೀಟುಗಳ ಶುಲ್ಕವನ್ನು ರೂ. 50,000/- ಗಳಿಗೆ & ಸರ್ಕಾರಿ ದಂತ ವೈದ್ಯಕೀಯ ಕಾಲೇಜಿನ ಬಿಡಿಎಸ್ ಸೀಟುಗಳ ಶುಲ್ಕವನ್ನು ರೂ. 40,000/- ಗಳಿಗೆ ನಿಗದಿಪಡಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 168 ಆರ್‌ಜಿಯು 2018, ಬೆಂಗಳೂರು, ದಿ: 26-06-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2018-19 ನೇ ಸಾಲಿನಿಂದ ಜಾರಿಗೆ ಬರುವಂತೆ ಸರ್ಕಾರಿ ವೈದ್ಯಕೀಯ & ದಂತ ವೈದ್ಯಕೀಯ ಕಾಲೇಜುಗಳಲ್ಲಿನ